ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಇದು ಉತ್ತರವಾಗುವುದಿಲ್ಲ, ನಾನು ಪ್ರಶ್ನೆ ಕೇಳಿರುವುದಕ್ಕೆ ಉತ್ತರವೇ ಸಿಕ್ಕಿಲ್ಲ. ಇದಕ್ಕೆ ಎಷ್ಟು ಹಣವನ್ನು ಒದಗಿಸಿದ್ದಾರೆ? ಇದು ಪದವಿ ಪೂರ್ವ ಕಾಲೇಜಿಗೆ ಮತ್ತು ಹೈಸ್ಕೂಲ್‌ಗೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕಲ್ಲಾ? ಅವರು ಹೈಸ್ಕೂಲ್‌ಗೆ ಮತ್ತು ಪಿ.ಯು.ಸಿ. ಕಾಲೇಜುಗಳಿಗೆ ದುಡ್ಡನ್ನು ಇಟ್ಟಿಲ್ಲವೆಂದು ಹೇಳಿಬಿಡಿ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾನು ಪ್ರಶ್ನೆ ಕೇಳುವ ಉದ್ದೇಶವೇನೆಂದರೆ ಇದಕ್ಕೆ ದುಡ್ಡು ಇಟ್ಟಿಲ್ಲ. ನೀವು ಪಿ.ಯು.ಸಿ. ಕಾಲೇಜಿಗೆ ಆದ್ಯತೆಯನ್ನು ಕೊಡದೇ ಹೋದರೆ, ಈ ಸರ್ಕಾರ ಆದ್ಯತೆ ಇಟ್ಟಿಲ್ಲವೆಂದು ಹೇಳಿ. ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಬಹಳ ಮುಜುಗರ ಪಡುತ್ತಿದ್ದಾರೆ.

ಶ್ರೀ ಎಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಹಣಕಾಸಿನ ನೆರವಿನ ವಿವರಗಳು ಬೇಕೆಂದರೆ, ಅದಕ್ಕೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಲಿ. ಅದಕ್ಕೆ ನಾನು ಉತ್ತರವನ್ನು ದೊರಕಿಸಿಕೊಡುತ್ತೇನೆ.

ವಿಜಾಪುರ ಜಿಲ್ಲೆಯ ಶಿಕ್ಷಣ ಅಭಿವೃದ್ಧಿ ಸೂಚ್ಯಾಂಕಗಳ ಬಗ್ಗೆ

31 (318) ಶ್ರೀ ಬಗಲಿ ಸಾರ್ವಭೌಮ ಸಠಗೌಡ [ಇಂಡಿ]

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ವಿಜಾಪುರ ಜಿಲ್ಲೆಯ ಶಿಕ್ಷಣ ಅಭಿವೃದ್ಧಿ ಸೂಚ್ಯಂಕಗಳು ರಾಜ್ಯದಲ್ಲಿಯೇ ಕೊನೆಯ ಸ್ಥಾನದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ;

ಶಿಕ್ಷಣ ಅಭಿವೃದ್ಧಿ ಸೂಚ್ಯಂಕದಲ್ಲಿ ವಿಜಾಪುರ ಜಿಲ್ಲೆಯು 26ನೇ ಸ್ಥಾನದಲ್ಲಿದೆ

ಆ) ಇಂಡಿ ಮತಕ್ಷೇತ್ರದ ಶಿಕ್ಷಣ ಅಭಿವೃದ್ಧಿ ಸೂಚ್ಯಂಕಗಳ ಪ್ರಮಾಣಗಳು ಎಷ್ಟೆಷ್ಟಿವೆ ಎಂಬುದನ್ನು ತಿಳಿಸುವುದು;

202 ಬ್ಲಾಕ್‌ಗಳಲ್ಲಿ ಇಂಡಿ ಮತಕ್ಷೇತ್ರದ ಶಿಕ್ಷಣ ಅಭಿವೃದ್ಧಿ ಸೂಚ್ಯಂಕಗಳ ಪ್ರಮಾಣಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಸೂಚ್ಯಂಕ	ಸ್ಥಾನ
1	ಮಕ್ಕಳ ಕಲಿಕಾ ಸೂಚ್ಯಂಕ	169
2	ಶಿಕ್ಷಕರ ಸೂಚ್ಯಂಕ	173
3	ಶಾಲಾ ಲಭ್ಯತೆಯ ಸೂಚ್ಯಂಕ	193
4	ಭೌತಿಕ ಸೌಲಭ್ಯ ಸೂಚ್ಯಂಕ	185

ಒಟ್ಟಾರೆ ಇಂಡಿ ಬ್ಲಾಕ್‌ನ ಸೂಚ್ಯಂಕವು ರಾಜ್ಯದಲ್ಲಿ 181ನೇ ಸ್ಥಾನವನ್ನು ಪಡೆದಿರುತ್ತದೆ.

ಇ) ಶಿಕ್ಷಣ ಅಭಿವೃದ್ಧಿ ಸೂಚ್ಯಂಕಗಳ ಪ್ರಕಾರ ಅತ್ಯಂತ ಹಿಂದುಳಿದ ಮತ ಕ್ಷೇತ್ರದ ಅಭಿವೃದ್ಧಿ ಸೂಚ್ಯಂಕಗಳನ್ನು ಉತ್ತಮಗೊಳಿಸಲು ವಿಶೇಷ ಯೋಜನೆ ಏನಾದರೂ ರೂಪಿಸಿದೆಯೇ(ವಿವರಗಳನ್ನು ನೀಡುವುದು)?

ಸದರಿ ಸೂಚ್ಯಂಕವನ್ನು ಉತ್ತಮಗೊಳಿಸಲು 2008–09ನೇ ಸಾಲಿಗೆ ಸರ್ವ ಶಿಕ್ಷಣ ಅಭಿಯಾನದಡಿ ಇಂಡಿ ತಾಲ್ಲೂಕಿಗೆ 7 ಹೊಸ ಪ್ರಾಥಮಿಕ ಶಾಲೆಗಳು, 348 ಶಿಕ್ಷಕರನ್ನು ಮಂಜೂರು ಮಾಡಿದೆ. ಮಕ್ಕಳ ಕಲಿಕೆಯನ್ನು ಉತ್ತಮ ಗೊಳಿಸಲು ಎಲ್ಲಾ ಶಿಕ್ಷಕರಿಗೆ 17 ದಿನಗಳ ತರಬೇತಿ, ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗೆ ಪರಿಹಾರ ಬೋಧನೆ, ಅನುದಾನಿತ ಶಾಲಾ ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ಹಾಗೂ ಮಕ್ಕಳಲ್ಲಿ ಓದುವ ಕೌಶಲ್ಯ ಅಭಿವೃದ್ಧಿ ಪಡಿಸಲು "ಓದುವೆ ನಾನು ಕಾರ್ಯಕ್ರಮ" ಅನುಷ್ಠಾನ, ಸಂಚಾರಿ ವಿಜ್ಞಾನ ಪ್ರಯೋಗಾಲಯ, ಮಕ್ಕಳ ಸಂಖ್ಯೆ 30 ಕ್ಕಿಂತ ಕಡಿಮೆ ಇರುವ ತಾಲ್ಲೂಕಿನ ಶಾಲೆಗಳಲ್ಲಿ ನಲಿ–ಕಲಿ ಕಾರ್ಯಕ್ರಮ ಅನುಷ್ಠಾನ, 1ನೇ ತರಗತಿಯಿಂದ ಇಂಗ್ಲೀಷ್ ಭಾಷಾ ಬೋಧನೆ, ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕಂಪ್ಯೂಟರ್ ಕಲಿಕಾ ಕೇಂದ್ರಗಳ ಸ್ಥಾಪನೆ, ಇತ್ಯಾದಿ, ಭೌತಿಕ ಸೌಲಭ್ಯದಡಿ 7 ಶಾಲಾ ಕಟ್ಟಡ, 43 ಹೆಚ್ಚುವರಿ ಶಾಲಾ ಕೊಠಡಿ ನಿರ್ಮಾಣ, 59 ಶಾಲೆಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯ, 5 ಶಾಲೆಗಳಿಗೆ ವಿಶೇಷ ಅಗತ್ಯತೆ ಯುಳ್ಳ ಮಕ್ಕಳಿಗಾಗಿ ವಿಶೇಷ ಶೌಚಾಲಯ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆ.

ಡಾ:ಬಗಲಿ ಸಾರ್ವಭೌಮ ಸಠಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು ಸಮರ್ಪಕವಾದ ಉತ್ತರವನ್ನು ನೀಡಿದ್ದಾರೆ. ಆದರೆ ಶಿಕ್ಷಕರ ಬೋಧನಾ ಸಾಮರ್ಥ್ಯ, ಕಲಿಕಾ ಕೌಶಲ್ಯ ಹಾಗೂ ಗುಣಮಟ್ಟದ ಶಿಕ್ಷಣವನ್ನು ನೀಡಲು ಶಿಕ್ಷಕರಿಗೆ motivation ಮಾಡಲು ಯಾವ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದಾರೆ? ಎರಡನೆಯದಾಗಿ ಈ ಸೂಚ್ಯಂಕಗಳಲ್ಲಿ ನಾಲ್ಕು ಸೂಚ್ಯಂಕಗಳ ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ drop out rate ಹಾಗೂ retention rate ಬಗ್ಗೆ ಮಾಹಿತಿಗಳನ್ನು ನೀಡಿರುವುದಿಲ್ಲ. ಮೂರನೆಯದಾಗಿ ಪ್ರೌಢಶಾಲೆಗಳಲ್ಲಿ ಶಿಕ್ಷಣ ಮಟ್ಟವನ್ನು ಎತ್ತರಿಸಲು digital classroomನ ವ್ಯವಸ್ಥೆಯನ್ನು ತರುವ ಕಾರ್ಯಕ್ರಮವೇನಾದರೂ ಸರ್ಕಾರದ ಬಳಿ ಇದೆಯೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಶಾಸಕರಾದ ಡಾ:ಬಗಲಿ ಸಾರ್ವಭೌಮ ಸಠಗೌಡರವರು ವಿಜಾಪುರ ಜಿಲ್ಲೆಯು ಶಿಕ್ಷಣ ಅಭಿವೃದ್ಧಿ ಸೂಚ್ಯಂಕದಲ್ಲಿ ಎಷ್ಟನೇ ಸ್ಥಾನದಲ್ಲಿದೆಯೆಂದು ಕೇಳಿದ್ದಾರೆ. ತಮಗೆ ಗೊತ್ತಿರುವ ಹಾಗೆ ನಮ್ಮ ವಿಜಾಪುರ ಜಿಲ್ಲೆ 26ನೇ ಸ್ಥಾನದಲ್ಲಿದೆ. ನಾವು ಅಲ್ಲಿಯ ಮಕ್ಕಳ ಕಲಿಕಾ ಸೂಚ್ಯಂಕ, ಶಿಕ್ಷಕರ ಸೂಚ್ಯಂಕ ಮತ್ತು ಶಾಲಾ ಲಭ್ಯತೆಯ ಸೂಚ್ಯಂಕ ಹಾಗೂ ಭೌತಿಕ

ಸೌಲಭ್ಯ ಸೂಚ್ಯಂಕ ಈ ನಾಲ್ಕು ಬೇರೆ ಬೇರೆ ವಿಭಾಗಗಳನ್ನು ನಾವು ಸರ್ವ ಶಿಕ್ಷಣ ಅಭಿಯಾನ ನೀತಿಗಳ ಪ್ರಕಾರವಾಗಿ ವಿಂಗಡಿಸಿ, ಇದನ್ನು ಅಳತೆ ಮಾಡಿದಾಗ, ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕು ಮಕ್ಕಳ ಕಲಿಕಾ ಸೂಚ್ಯಂಕದಲ್ಲಿ 169ನೇ ಸ್ಥಾನದಲ್ಲಿದೆ. ಶಿಕ್ಷಕರ ಸೂಚ್ಯಂಕದಲ್ಲಿ 173ನೇ ಸ್ಥಾನದಲ್ಲಿದೆ. ಶಾಲಾ ಲಭ್ಯತೆ ಸೂಚ್ಯಂಕದಲ್ಲಿ 193ನೇ ಸ್ಥಾನದಲ್ಲಿದೆ ಮತ್ತು ಭೌತಿಕ ಸೌಲಭ್ಯ ಸೂಚ್ಯಂದಲ್ಲಿ 185ನೇ ಸ್ಥಾನದಲ್ಲಿದೆ. ಆ ರೀತಿ ನೋಡಿದರೆ ರಾಜ್ಯದ ಶೈಕ್ಷಣಿಕ ಪರಿಸ್ಥಿತಿಯನ್ನು ಅವಲೋಕಿಸಿದರೆ ಈ ವಿವರಗಳು 2006–07ನೇ ಸಾಲಿನ ವಿವರಗಳು 202 ಶೈಕ್ಷಣಿಕ ಬ್ಲಾಕ್‌ಗಳಲ್ಲಿ ನಮ್ಮ ವಿಜಾಪುರದ ಮತ್ತು ಇಂಡಿ ಸ್ಥಾನ ವಿಚಾರ 2006–07ರಲ್ಲಿ ಸರ್ಕಾರದ ಗಮನಕ್ಕೆ ಬಂದ ನಂತರ ಇನ್ನೂ ಸಾಕಷ್ಟು ಸುಧಾರಿಸಿಕೊಳ್ಳುವುದಕ್ಕೆ ಅವಕಾಶವಿದೆ ಎಂದು ಕಂಡು ಬಂದಿದೆ. ನಾವು ಇದನ್ನು ಸುಧಾರಿಸಿಕೊಳ್ಳುವುದಕ್ಕೋಸ್ಕರವಾಗಿ 7 ಹೊಸ ಪ್ರಾಥಮಿಕ ಶಾಲೆಗಳನ್ನು ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ 2007–08ನೇ ಸಾಲಿನಲ್ಲಿ 284 ಶಾಲಾ ಶಿಕ್ಷಕರನ್ನು ಕೊಟ್ಟಿದ್ದೇವೆ, 2008–09ರಲ್ಲಿ 348 ಶಿಕ್ಷಕರನ್ನು ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ಶಿಕ್ಷಕರ ತರಬೇತಿಯನ್ನು ಕಡ್ಡಾಯವಾಗಿ 17 ದಿವಸಗಳ ಕಾಲ DIET ಮೂಲಕ ಕೊಟ್ಟಿದ್ದೇವೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಮಾನ್ಯ ಸದಸ್ಯರು ಕೆಲವು clarification ಏನು ಕೇಳಿದರು. ತಾವು ಅದಕ್ಕೆ ಮಾತ್ರ ಉತ್ತರವನ್ನು ಕೊಟ್ಟರೆ ಒಳ್ಳೆಯದು. ಅದರಿಂದ ನಮಗೆ ಸಮಯ ಉಳಿಯುತ್ತದೆ. ನೀವು ಉತ್ತರದಲ್ಲಿ ಎಲ್ಲವನ್ನೂ ಹೇಳಿದ್ದೀರಿ. ಈಗ ಅವರು ಕೆಲವು ಸ್ಪಷ್ಟೀಕರಣವನ್ನು ಕೇಳಿದ್ದಾರೆ. ತಾವು ಅದಕ್ಕೆ ಮಾತ್ರ ಉತ್ತರ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಸದಸ್ಯರು ಕೇಳಿರುವಂಥ ಉಪ ಪ್ರಶ್ನೆಗಳಿಗೂ ಸಹ ನಾವು ಈಗಾಗಲೆ ಓದುವೆ ನಾನು ಕಾರ್ಯಕ್ರಮ ಮತ್ತು ಸಂಚಾರಿ ವಿಜ್ಞಾನ ಪ್ರಯೋಗಾಲಯ ಮತ್ತು ನಲಿ–ಕಲಿ ಕಾರ್ಯಕ್ರಮ, ಕಂಪ್ಯೂಟರ್ ಕೊಡುವುದು, ಶಾಲಾ ಕೊಠಡಿಗಳನ್ನು ಕೊಡುವುದು, ಬೇರೆ ಬೇರೆ ಸೌಲಭ್ಯಗಳನ್ನು ಕೊಡುವುದರ ಮೂಲಕ ನಮ್ಮ ಸೂಚ್ಯಾಂಕದಲ್ಲಿ ವಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕು ಅನ್ನು ಸಹ ಸುಧಾರಣಾ ಕ್ರಮವಾಗಿ ನಾವು ಸಾಕಷ್ಟು ಮಾಡಿದ್ದೇವೆಂಬ ವಿಚಾರವನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತಿದ್ದೇನೆ.

ಅಧ್ಯಕ್ಷರು: ಆಯಿತು, ಉನ್ನತ ಶಿಕ್ಷಣ ಸಚಿವರು ಬಂದಿದ್ದಾರೆ. ಮಾನ್ಯ ಬಾಲಕೃಷ್ಣರವರೆ ತಾವು ಪ್ರಶ್ನೆ ಕೇಳಿ.